ಯಾರಾದರೂ ಟ್ಯಾಂಕಿಗೆ ಕೊಬ್ಬರಿ ಎಣ್ಣೆಯನ್ನು ಹಾಕಿ ಗಾಡಿ ಓಡಿಸುತ್ತಿರಬಹುದೆ?

ಪತ್ನಿ ನನ್ನ ತೋಳನ್ನು ಮತ್ತೆ ಜಗ್ಗಿ ಫುಟ್‌ಪಾತ್ ಕಡೆ ತೋರಿಸುತ್ತ, 'ಅಲ್ಲಿ ಅದೇನು ಮಾಡ್ತಿದಾರೆ ನೋಡಿ' ಎಂದಳು. ನಾನು ನೋಡುವ ಮುಂಚೆಯೇ ತೋಳಿನ ಸಮೇತ ನನ್ನನ್ನೂ ಜಗ್ಗಿ ಅತ್ತ ಹೆಜ್ಜೆ ಹಾಕಿದಳು. ರಸ್ತೆ ಬಿಟ್ಟು ಫುಟ್‌ಪಾತ್‌ಗೆ ಬಂದೆವು. ಆ ಇಕ್ಕಟ್ಟಿನಲ್ಲೇ ವೃತ್ತಾಕಾರ ನಿಂತು ಜನರು ಪೇಪರ್ ತಟ್ಟೆಯಲ್ಲಿ ಅದೇನೊ ಗೋಲಗಪ್ಪದಂಥ ಉಂಡೆಗಳನ್ನು ಮೆಲ್ಲುತ್ತಿದ್ದರು. ದೋಸೆಯ ಗಾಢ ವಾಸನೆ ಅಲ್ಲಿಂದಲೇ ಬರುತ್ತಿತ್ತು. ದೋಸೆ ಮಾತ್ರ ಕಾಣುತ್ತಿರಲಿಲ್ಲ.

ಸಮೀಪ ಹೋಗಿ ನೋಡಿದಾಗ ಗೊತ್ತಾಯಿತು. ಅಲ್ಲೊಬ್ಬ ತಮಿಳಮ್ಮ ಪಡ್ಡು ಬೇಯಿಸುತ್ತಿದ್ದಳು. ಗುಂಡು ಪೊಂಗ್ಲು ಅಂತಾನೂ ತೆಲುಗಿನವರು ಹೇಳುತ್ತಾರೆ. ದೋಸೆಯದೇ ಬೇರೆ ರೂಪ ಮತ್ತು ಬೇರೆ ಆಯಾಮ ಅದಕ್ಕಿರುತ್ತದೆ. ದೋಸೆ ಎಂದರೆ ಸೌರಮಂಡಲದ ಹಾಗೆ ದೀರ್ಘ ವೃತ್ತಾಕಾರದ್ದಾಗಿದ್ದರೆ ಈ ಪಡ್ಡು ಎಂಬುದು ಗ್ರಹಗಳಂತೆ ಗೋಲಾಕಾರ. ದೋಸೆ ಟೂ–ಡಿ ಆಗಿದ್ದರೆ ಪಡ್ಡು ಥ್ರೀ–ಡಿ. ಆಸಕ್ತರು ಬೇಕಿದ್ದರೆ 'ಕುಳಿ ಪನಿಯಾರಂ (**kuli paniyaram**)' ಎಂದು ಗೂಗಲಿಸಿ ನೋಡಬಹುದು. ಹಿಟ್ಟು ಮಾತ್ರ ಎರಡಕ್ಕೂ ಒಂದೇ. ಹುದುಗು ಬರಿಸಿದ ಅಕ್ಕಿ ಹಿಟ್ಟಿಗೆ ತುಸು ಈರುಳ್ಳಿ, ತೆಂಗಿನ ಹಾಲು, ಕೊತ್ತಂಬರಿ ಸೊಪ್ಪು, ಉಪ್ಪು ಹಾಕಿ ಬೇಯಿಸೋದು.

ನೋಡೋಣವೆಂದು ಇನ್ನೂ ಸಮೀಪ ಹೋಗಿ ನೋಡಿದೆ. ಅದು ಜಂಬೋ ಕಾವಲಿ! ನಮ್ಮ ಮನೆಬಳಕೆಯ ಪಡ್ಡು ಪಾತ್ರೆಯಲ್ಲಿ ಮೂರೋ ನಾಲ್ಕೋ ಕುಳಿಗಳಿರುವುದನ್ನು ನಾನು ನೋಡಿದ್ದುಂಟು. ಇಲ್ಲಿ ನೋಡಿದರೆ ಮೀಟರ್ ಅಗಲದ ಕಾವಲಿಯ ಮೇಲೆ ಛಪ್ಪನ್ನಾರು ಗುಳಿಗಳಿದ್ದವು. ಬಿಟ್ಟ ಬಾಯಿ ಬಿಟ್ಟು ನೋಡುತ್ತ ನಿಂತೆ. ಸುತ್ತ ನಿಂತವರ ಯಾರ ಬಾಯಿಗೂ ಬಿಡುವಿರಲಿಲ್ಲ. ಕಾವಲಿಯಲ್ಲಿ ಬೆಂದ ಪಡ್ಡುಗಳಿಗೆ ಸಲಾಕೆ ಚುಚ್ಚಿ ಮೇಲೆತ್ತಿ ಸರಸರ ಹಂಚುತ್ತಿದ್ದ ಆ ಮಹಾತಾಯಿಯ ಕೈಗೂ ಬಿಡುವಿರಲಿಲ್ಲ.

ನನ್ನ ಪಾಲಿಗೆ ಅದೊಂದು ದಿವ್ಯ ದರ್ಶನವೇ ಆಗಿತ್ತು. ವೃತ್ತಾಕಾರದ ಕಾವಲಿಯಲ್ಲಿ ಕುಳಿಗಳ ಸಾಲುಗಳೂ ವೃತ್ತಾಕಾರವಾಗಿದ್ದವು. ಎಲ್ಲಕ್ಕಿಂತ ಹೊರಗಿನ ವೃತ್ತದಲ್ಲಿ ಹದಿನೈದು ಕುಳಿಗಳು. ನಂತರದ ಒಳವೃತ್ತದಲ್ಲಿ ಹನ್ನೆರಡು, ಆಮೇಲೆ ಆರು, ನಂತರ ಕಾವಲಿಯ ಕೇಂದ್ರದಲ್ಲಿ ಮೂರು ಕುಳಿಗಳ ಕೇಂದ್ರವೃತ್ತ. ಒಂಥರಾ ಸೌರಮಂಡಲವನ್ನೇ ನೋಡಿದಂತಾಯಿತು.

ಕಾವಲಿಯ ಮಧ್ಯದ ಕಕ್ಷೆಗಳ ಆರೆಂಟು ಕುಳಿಗಳತ್ತ ಮಾತ್ರ ಆ ತಮಿಳಮ್ಮನ ಗಮನ ಇದ್ದಂತಿತ್ತು. ಅವಳು **Busy**. ಸುತ್ತ ಕಾವಲಿಯ ಬಿಸಿ. ತುಸು ದೂರದಲ್ಲಿ ನಿಂತ ಗಿರಾಕಿಗಳ ಕೈಬಾಯಿ **Busy**. ಅಂತೂ ಬಿಸಿಬಿಸಿ ಪಡ್ಡುಗಳನ್ನು ಅಲ್ಲಿಂದಲೇ ಎತ್ತಿ ಗಿರಾಕಿಗಳಿಗೆ ನೀಡುತ್ತಿದ್ದಳು. ಖಾಲಿಯಾದ ಕುಳಿಗಳಿಗೆ ತೈಲ ಪ್ರೋಕ್ಷಣೆ ಮಾಡಿ ಬಿಳೀಹಿಟ್ಟನ್ನು ಸುರಿಯುತ್ತಿದ್ದಳು. ಕೇಂದ್ರಭಾಗದ ಕುಳಿಗಳಲ್ಲಿ ಇನ್ನೂ ಹಸಿಹಸಿ ಬಿಳೀ ಪಡ್ಡುಗಳು. ಅವು ತುಸು ಬೇಯುತ್ತಲೇ ಸಲಾಕೆಯಲ್ಲಿ ಎತ್ತಿ ಮಗುಚಿ ಅದರ ಪಕ್ಕದ ದೊಡ್ಡ ಕಕ್ಷೆಯಲ್ಲಿದ್ದ ಕುಳಿಗಳಿಗೆ ಹಾಕುತ್ತಿದ್ದಳು. ಆ ಕುಳಿಗಳಿಗೆ ತಲೆಕೆಳಗಾಗಿ ಬಿದ್ದ ಪಡ್ಡುಗಳು ಉದ್ದಿನ ವಡೆಯಂತೆ ಸುಂದರ ಬ್ರೌನ್ ಬಣ್ಣದ್ದಾಗಿದ್ದವು. ಎಲ್ಲಕ್ಕಿಂತ ಹೊರಗಿನ ದೊಡ್ಡವೃತ್ತದ ಕುಳಿಗಳಲ್ಲಿ ಪಡ್ಡುಗಳು ತುಂಬ ಹೊತ್ತು ಬೆಚ್ಚಗೆ ಕೂತೇ ಇದ್ದವು. ಅವು ಜಾಸ್ತಿ ಬೆಂದು ಡೀಪ್ ಬ್ರೌನ್ ಬಣ್ಣಕ್ಕೆ, ಕೆಲವಂತೂ ಪಡ್ಡಿಗಾಗಿ ಕಾದು ನಿಂತ ತಮಿಳರ ಬಣ್ಣಕ್ಕೆ ತಿರುಗಿದ್ದವು. ಯಾರಾದರೂ ರೋಸ್ಟ್ ಪಡ್ಡು ಬೇಕೆಂದು ಪಟ್ಟು ಹಿಡಿದರೆ ಮಾತ್ರ ಅವು ಆ ಕೊನೆಯ ವೃತ್ತದ ಕುಳಿಗಳಿಂದ ಮೇಲಕ್ಕೆದ್ದು ಮತ್ತೆ ಬಿಸಿಯಾಗಿ ಗಿರಾಕಿಗಳ ಪ್ಲೇಟ್‌ಗಳಿಗೆ ಬರುತ್ತಿದ್ದವು.

ಒಟ್ಟಿನಮೇಲೆ ಇಡೀ ಕಾವಲಿ ಒಂದು ಸುಂದರ ಕಲಾಕೃತಿಯಂತೆ ಕಾಣುತ್ತಿತ್ತು. ನಡೂ ಮಧ್ಯೆ ಬ್ರಿಟಿಷರ ಬಿಳಿ, ನಂತರ ಭಾರತೀಯರ ಕಂದು; ಅಂದರೆ ಅದು ಹದವಾಗಿ ಬೆಂದ ಕಂದು. ಆಮೇಲೆ